ದಿನಾಂಕ 25-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎ. ಎಂ ವಕೀಲರವರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಹೊಲದಲ್ಲಿ ಕೆಲಸ ಮಾಡುತ್ತೇನೆ. ಗಾಯವಾದವನು ನನ್ನ ಮೂರನೇ ಮಗ. ಅಪಘಾತ ನಾನು ಕಣ್ಣಾರೆ ನೋಡಿರುತ್ತೇನೆ. ನನ್ನ ಮಗನಿಗೆ 4 ಜನ ಬೈಕಿನಲ್ಲಿ ಕುಳಿತುಕೊಳ್ಳಬೇಡ ಎಂದು ನಾನು ಸಲಹೆ ನೀಡಿರುವುದಿಲ್ಲ. ಈ ಅಪಘಾತ 12.30 ಗಂಟೆಗೆ ಆಗಿರುತ್ತದೆ. ನನ್ನ ಮಗ ಅಪಘಾತವಾಗುವಾಗ ಸುವರ್ಣಗಿರಿಯಿಂದ ಊರಿಗೆ ಹೊರಟಿದ್ದರು. ಆ ಸಮಯದಲ್ಲಿ ನಾನು ನನ್ನ ಹೊಲದಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಮಾಡುತ್ತಿದ್ದ ಹೊಲಕ್ಕೂ ಸುವರ್ಣಗಿರಿಗೂ 10 ಕಿ. ಮೀ ಆಗುತ್ತದೆ.

ಅಪಘಾತಪಡಿಸಿದ ಗೂಡ್ಸ್ ರಿಕ್ಷಾದ ಬಗ್ಗೆ ನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಗೂಡ್ಸ್ ರಿಕ್ಷಾ ತಾಂಡಾದಿಂದ ಸುವರ್ಣಗಿರಿ ಕಡೆಗೆ ಹೋಗುತ್ತಿತ್ತು. ನನ್ನ ಮಗನನ್ನು ಮೊದಲ ಬಾರಿ ಅಪಘಾತ ಸ್ಥಳ ದಲ್ಲೇ ನೋಡಿರುತ್ತೇನೆ. ನಾನು ಅಪಘಾತ ಸಮಯಲ್ಲಿ ಸ್ಥಳ ದಲ್ಲೇ ಇದ್ದೆ, ಬೈಕಿನ ಚಾಲಕನ ಹೆಸರು ಅಭಿಷೇಕ್. ಅಭಿಷೇಕ್ ನನ್ನ ಹಿರಿಯ ಮಗ. ನನ್ನ ಮಗ ಓಡಿಸುತ್ತಿದ್ದ ಬೈಕ್ ನನ್ನ ಹೆಸರಿನಲ್ಲಿ ಇದ್ದೆ. 2018 ರಲ್ಲಿ ಸದ್ರಿ ಬೈಕ್ ನಾನು ಖರೀದಿ ಮಾಡಿದ್ದೆ. ಅಪಘಾತ ಸಮಯದಲ್ಲಿ ನನ್ನ ಬೈಕಿಗೆ ವಿಮೆ ಇತ್ತು. ಅಭಿಷೇಕ್ ಗೆ ಅಪಘಾತವಾಗುವ ಸಮಯದಲ್ಲಿ 17½ ವರುಷ . ನಾನು ನನ್ನ ಮಗನಿಗೆ ನೀನು ಚಿಕ್ಕವನು ವಾಹನ ಚಾಲನೆ ಪರವಾನಿಗೆ ಇಲ್ಲದೆ ಚಾಹನ ಚಲಾಯಿಸಬೇಡ ಎಂದು ಹೇಳಿರುತ್ತೇನೆ. ನನಗೆ ವಾಹನ ಬಿಡಲು ವಾಹನ ಚಾಲನಾ ಪರವಾನಿಗೆ ಇರುತ್ತದೆ. ಬೈಕಿನ ಕೀಯನ್ನು ನನ್ನ ಬಳಿ ಇಟ್ಟು ಕೊಳ್ಳಲು ಏನು ತೊಂದರೆ ಇರಲಿಲ್ಲ.

ನನ್ನನ್ನು ಪೊಲೀಸಿನವರು ವಿಚಾರಣೆ ಮಾಡಿರುತ್ತಾರೆ. ನ್ಯಾಯಾಲಯಕ್ಕೆ ನಾನು 8 ಸಾವಿರ ರೂ ದಂಡ ಪಾವಾತಿ ಮಾಡಿರುತ್ತೇನೆ. ಅಪಘಾತವಾದ ಬಳಿಕ ನಾನು ನನ್ನ ಮಗನನ್ನು ಸುವರ್ಣಗಿರಿ ಆಸ್ಪತ್ರೆಗೆ , ಲಕ್ಷ್ಮೀಶ್ವರ ಆಸ್ಪತ್ರೆ ನಂತರ ಗದಗ ಜಿಲ್ಲೆ ಆಸ್ಪತ್ರೆ ನಂತರ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಚಿಕಿತ್ಸೆ ಗೆ ಕರೆದುಕೊಂಡು ಹೋಗಿರುತ್ತೇನೆ.

ನನ್ನ ಮಗ 7 ನೇ ತರಗತಿಯಲ್ಲಿ ಶಾಲೆಯನ್ನು ಬಿಟ್ಟಿರುತ್ತಾನೆ. ಪರಿಹಾರ ಅರ್ಜಿಯನ್ನು ಸುವರ್ಣಗಿರಿಯಲ್ಲಿ ಸಲ್ಲಿಸಲು ತೊಂದರೆ ಇರಲಿಲ್ಲ. ಚಿನ್ಮಯ ಆಸ್ಪತ್ರೆಯಲ್ಲಿ ಕೊನೆಯದಾಗಿ ಚಿಕಿತ್ಸೆ ಪಡೆದಿರುವುದರಿಂದ ಉಡುಪಿಯಲ್ಲಿ ಪರಿಹಾರ ಅರ್ಜಿ ಸಲ್ಲಿಸಿದ್ದು ಕಾರಣವೇನೆಂದರೆ ಉಡುಪಿಯಲ್ಲಿ ನಮ್ಮ ಸಂಬಂದಿಕರ ಸಲಹೆ ಮೇರೆಗೆ ಉಡುಪಿ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಗದಗ ಆಸ್ಪತ್ರೆ ಯಿಂದ ಒಳರೋಗಿಯಾಗಿ ಬಿಡುಗಡೆಯಾದ ನಂತರ ಚಿನ್ಮಯಿ ಆಸ್ಪತ್ರೆಗೆ ದಾಖಲಾಗಿದ್ದನು. ಚಿನ್ಮಯಿ ಆಸ್ಪತ್ರೆಯಲ್ಲಿ 3 ದಿನ ಒಳ ರೋಗಿಯಾಗಿ ದಾಖಲಾಗಿ ನಂತರ ಬಿಡುಗಡೆಯಾಗಿ ಹೋಗಿರುತ್ತೇವೆ. ಚಿನ್ಮಯಿ ಆಸ್ಪತ್ರೆಯಲ್ಲಿ ನನ್ನ ಮಗ ಒಳ ರೋಗಿಯಾಗಿ ದಾಖಲಾಗಿಲ್ಲ. ನಿಪಿ 20 ನ್ನು ಪಡೆಯುವ ಒಂದೆ ಉದ್ದೇಶಕ್ಕಾಗಿ ಚಿನ್ಮಯಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ದಾಖಲಾಗಿರುತ್ತಾನೆ ಬೇರೆ ಕಾರಣಕ್ಕೆ ಅಲ್ಲ ಎಂದರೆ ಸರಿಯಲ್ಲ. ಚಿನ್ಮಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಒಳ ರೋಗಿ ಬಿಲ್ಲು ಮತ್ತು ಆಸ್ಪತ್ರೆ ಬಿಡುಗಡೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನನ್ನ ಮಗನನ್ನು ಇತ್ತೀಚೆಗೆ 6 ತಿಂಗಳ ಹಿಂದೆ ಗದಗ ಆಸ್ಪತ್ರೆ ಗೆ ಹೋಗಿರುತ್ತೇನೆ. ಚಿನ್ಮಯ ಆಸ್ಪತ್ರೆ ಯ ವೈದ್ಯರು ನನ್ನ ಮಗನಿಗೆ ಚಿಕಿತ್ಸೆ ನೀಡಿರುತ್ತಾರೆ. ಚಿನ್ಮಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಹೇಳಲು ಬರುವುದಿಲ್ಲ. ಗದಗ ಆಸ್ಪತ್ರೆ ಯಲ್ಲಿ ನೀಡಿದ ಔಷದಿ ಸಲಹೆ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಿಪಿ 20 ಸೃಷ್ಟಿ ಮಾಡಿ ಹಾಜರು ಪಡಿಸಿದ ದಾಖಲೆಯಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮಗ ಸಂಪೂರ್ಣವಾಗಿ ಗುಣಮುಖವಾಗಿರುತ್ತಾನೆ ಈಗ ಯಾವುದೇ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಅತೀ ವೇಗ ಮತ್ತು ನಿರ್ಲಕ್ಷತನದಿನಿಂದ ಅಪಘಾತ ವಾಗಿರುತ್ತದೆ ಗೂಡ್ಸ್ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ದ್ವಿ ಚಕ್ರ ವಾಹನ ಚಾಲನೆ ಮಾಡಲು ವಾಹನ ಚಾಲನಾ ಪರವಾನಿಗೆ ಇಲ್ಲದೇ ಇದ್ದರೂ ಹಿಂಬದಿಯಲ್ಲಿ 3 ಜನರನ್ನು ಕುಳ್ಳಿರಿಸಿಕೊಂಡು ಚಾಲನೆ ಮಾಡಿ ಗಡಿಬಿಡಿಯಲ್ಲಿ ವಾಹನವನ್ನು ಚಲಾಯಿಸಿ ಈ ಅಪಘಾತವನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನೀವು ಅರ್ಜಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಷ್ಟು ಹಣವು ಔಷಧಿಗೆ, ಆಹಾರಕ್ಕೆ ಒಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲವೆಂದರೆ ಸರಿಯಲ್ಲ. 2 ನೇ ಎದ್ರುದಾರರು ಪರಿಹಾರದ ಹಣವನ್ನು ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

1 ನೇ ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.
ಉಡುಪಿ.